ಲೌಕಿಕ ಕರ್ತವ್ಯಗಳನ್ನು ನಿರ್ಲಕ್ಷಿಸಿದರೆ ಅವನು ತಂದೆತಾಯಿಗಳ ಬೇಸರಕ್ಕೆ ಕಾರಣವಾಗುವನು. ಅವನಲ್ಲಿ ಅನೇಕ ಒಳ್ಳೆಯ ಗುಣಗಳಿದ್ದರೂ, ಅವನು ಮದುವೆಯಾಗದೆ ಸಂನ್ಯಾಸಿಯಾಗಲು ಇಚ್ಛಿಸಿದರೆ ಅವನು ತಂದೆತಾಯಿಗಳ ಅಸಂತೋಷಕ್ಕೆ ಕಾರಣನಾಗುವನು. ಎಲ್ಲಕ್ಕೂ ಸರಿಯಾದ ಕಾಲವಿದೆ ಎಂದು ಅವರು ಬುದ್ಧಿವಾದ ಹೇಳುವರು. ಲೌಕಿಕ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿದ ನಂತರ ಅವನು ಆಧ್ಯಾತ್ಮಿಕ ಆಲೋಚನೆಗಳನ್ನು ಮಾಡಬಹುದು ಎಂದು ಉಪದೇಶಿಸುವರು. ಅವರ ಬುದ್ಧಿವಾದವನ್ನು ಕೇಳದಿದ್ದರೆ, ಮಗ ದಾರಿ ತಪ್ಪಿದ ಎಂದು ಹೇಳದಿದ್ದರೂ, ಅವನು ನಿಷ್ಪ್ರಯೋಜಕ, ಜೀವನದಲ್ಲಿ ಅವನಿಗೆ ಗೊತ್ತು–ಗುರಿ ಇಲ್ಲವೆಂದು ನೆಂಟರು, ಇಷ್ಟರೊಂದಿಗೆ ಹೇಳಿಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ. ಹೀಗೆ ತಂದೆತಾಯಿಗಳ ಪ್ರೀತಿಯಲ್ಲಿ ಸ್ವಾರ್ಥ ಇರುವುದು. ತಂದೆ, ಯಶಸ್ವೀ ಮಗನ ಪಕ್ಷಪಾತಿಯಾಗಿರುವುದನ್ನು ನೋಡಬಹುದು. ಎಲ್ಲಿಯವರೆಗೆ ಮಗ ಕೇವಲ ಬಾಲಕನೋ  ನಿಸ್ಸಹಾಯಕನೋ, ಅಲ್ಲಿಯವರೆಗೆ  ತಂದೆತಾಯಿಗಳು ನಿಷ್ಪಕ್ಷಪಾತಿಯಾಗಿರುವರು. ಆಮೇಲೆ ಹಾಗೆ ಇರುವುದಿಲ್ಲ. ಬಹುತೇಕ ತಂದೆತಾಯಿಗಳು, ಅವರ ವೃದ್ಧಾಪ್ಯದ ಕಾಲದಲ್ಲಿ ಗಂಡುಮಕ್ಕಳು ತಮ್ಮನ್ನು ನೋಡಿಕೊಳ್ಳುವರೆಂದು ನಿರೀಕ್ಷಿಸುವರು. ಆದ್ದರಿಂದ, ತಂದೆ ಅಥವಾ ತಾಯಿಯ ಪ್ರೀತಿ ಬಹು ದೊಡ್ಡದು ಎಂಬುದೇನೊ ನಿಜ, ಆದರೆ ಅದು ಸಂಪೂರ್ಣ ನಿಸ್ವಾರ್ಥವೆಂದು ಹೇಳಲಾಗದು.

ಬಹಳ ಕಷ್ಟಪಟ್ಟು ಯೋಚಿಸಿದರೆ ನನ್ನ ತಾಯಿಯ ಪ್ರೇಮದ ಮಿಂಚುನೋಟವೇನೋ ನನಗೆ ಗೋಚರವಾಗುವುದು. ಆದರೆ ಶ್ರೀರಾಮಕೃಷ್ಣರ ಪರಮ ಪರಿಶುದ್ಧ ಪರಿಪೂರ್ಣ ನಿಸ್ವಾರ್ಥ ಪ್ರೇಮವನ್ನು ನಾನು ಹೇಗೆ ತಾನೆ ಅರ್ಥ ಮಾಡಿಕೊಳ್ಳಲಿ, ಬರಿಯ ಮಾತುಗಳಿಂದ ಹೇಗೆ ತಾನೇ ಅದನ್ನು ವಿವರಿಸಲಿ? ಸ್ವಾರ್ಥರಹಿತ, ಮಾಯಾತೀತ ಪ್ರಜ್ಞೆಯ ಸ್ಥಿತಿಯನ್ನು ಮುಟ್ಟದೆ, ಮಾಯೆಯ ಸಂಕೋಲೆಯನ್ನು ಮುರಿದ ಆ ದೋಷಮುಕ್ತ ವ್ಯಕ್ತಿಯ ವರ್ತನೆಯನ್ನು ಹೇಗೆ ತಾನೇ ನಾನು ಅರ್ಥಮಾಡಿಕೊಳ್ಳಲಿ?  ಮಾಯೆಯಿಂದ ಸಂಪೂರ್ಣವಾಗಿ ಮುಕ್ತವಾಗಿದ್ದ ಯಾವ ಸ್ಥಿತಿಯನ್ನು ಶ್ರೀರಾಮಕೃಷ್ಣರು ಮುಟ್ಟಿದ್ದರೋ ಅದನ್ನು ನಾನೂ ಮುಟ್ಟಿದ್ದರೆ, ಆಗ ನನಗೊಬ್ಬ ಶಿಷ್ಯನಿದ್ದಿದ್ದರೆ, ಆ ಸಂದರ್ಭದಲ್ಲಿ ಮಾತ್ರವೇ ನನಗೆ ಶ್ರೀರಾಮಕೃಷ್ಣರ ಪ್ರೀತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಸ್ವಲ್ಪ ಶಕ್ತಿ ಬರುತ್ತಿತ್ತು ಎಂದೆನಿಸುತ್ತದೆ. ಆದರೆ ಅದನ್ನು ವ್ಯಕ್ತಪಡಿಸಲು ನನಗೆ ಸಾಧ್ಯವಾಗುತ್ತಿತ್ತೊ ಇಲ್ಲವೊ ತಿಳಿಯದು. ನನ್ನ ಜೀವನದ ಕಥೆ ನನಗೇ ಎಷ್ಟು ಅರಿವಿದೆಯೋ ಗೊತ್ತಿಲ್ಲ. ನನಗೆ ಗೊತ್ತಿಲ್ಲದಿರುವುದೂ ಬಹಳ ಇರಬಹುದು. ಆದರೆ ಇನ್ನೊಬ್ಬರ ಜೀವನದ ಕಥೆಯಂತೂ ನನಗೆ ಮುಚ್ಚಿದ ಪುಸ್ತಕದಂತೆಯೇ ಕಂಡುಬರುತ್ತದೆ. ಆದ್ದರಿಂದ ಈ ಲೇಖನದಲ್ಲಿ ನಾನು ನನ್ನ ಕಥೆಯನ್ನು ಮಾತ್ರ, ಅಂದರೆ ಶ್ರೀರಾಮಕೃಷ್ಣರು ನನ್ನ ಮೇಲೆ ತೋರಿದ ಅಪಾರ ಪ್ರೀತಿಯ ಬಗ್ಗೆ ಮಾತ್ರ ನನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತೇನೆ. ಅದಕ್ಕಿಂತ ಹೆಚ್ಚು ನನಗೆ ಸಾಧ್ಯವಿಲ್ಲ.  ಓದುಗರು  ಸಹಾನುಭೂತಿಯಿಂದ ನನ್ನನ್ನು ಕ್ಷಮಿಸಬೇಕು.

ಶ್ರೀರಾಮಕೃಷ್ಣರ ಬಳಿಗೆ ಹೋದವರೆಲ್ಲರೂ ಮೃದು ಸ್ವಭಾವದವರು, ಸಜ್ಜನರು ಮತ್ತು ಸದ್ಗುಣಿಗಳು. ನರೇಂದ್ರನಂತಹ ಹುಡುಗರು ಮತ್ತು ಶ್ರೀರಾಮಕೃಷ್ಣರು ತಮ್ಮ ಸ್ವಂತದವರೆಂದು ಭಾವಿಸಲ್ಪಟ್ಟಿದ್ದ ಇತರರು, ಸಣ್ಣವರಾಗಿದ್ದಾಗಲೆ ಗುರು ಮಹಾರಾಜರನ್ನು ದರ್ಶಿಸಿದರು. ಅವರ ಪ್ರೀತಿಯಿಂದ ಆಕರ್ಷಿತರಾಗಿ ತಮ್ಮ ಮನೆಗಳನ್ನು ಬಿಟ್ಟು ಶ್ರೀರಾಮಕೃಷ್ಣರ ಸಂದೇಶ ವನ್ನು ಹರಡಲು ಸಂನ್ಯಾಸ ಜೀವನವನ್ನು ಅಪ್ಪಿಕೊಂಡರು. ಈ ಬಾಲಕ ಶಿಷ್ಯರ ಮೇಲೆ ಶ್ರೀರಾಮಕೃಷ್ಣರು ತೋರಿದ ಪ್ರೀತಿಯನ್ನು ಮಾತ್ರ ವಿವರಿಸಿದರೆ, ಅವರ ಪ್ರೀತಿಯ ನೈಜ ಚಿತ್ರಣವನ್ನು ನೀಡಿದಂತಾಗುವುದಿಲ್ಲ. ದೋಷರಹಿತರೂ, ಪರಿಶುದ್ಧಾತ್ಮರೂ ಮತ್ತು ಶ್ರೀರಾಮಕೃಷ್ಣರಿಗಾಗಿ ಎಲ್ಲವನ್ನೂ ತ್ಯಜಿಸಿ ಅವರಲ್ಲಿ ಶರಣಾಗತರಾದವರೂ ಆದ ಈ ಹುಡುಗರ ಮೇಲೆ ಶ್ರೀರಾಮಕೃಷ್ಣರ ಪ್ರೀತಿ ಇದ್ದುದು ಸಹಜವಾಗಿಯೇ ಇದೆ. ಆದರೆ ನಾನು ಕೂಡ ಅವರ ಪ್ರೀತಿಯನ್ನು ಪಡೆದವನೇ ಆಗಿದ್ದೇನೆ. ಇದೇ ವಿಶೇಷವಾದುದೆಂದು ನನಗೆ ತೋರುವುದು. ಶ್ರೀರಾಮಕೃಷ್ಣರು ನನ್ನನ್ನು ಎಡೆಬಿಡದೆ ಪ್ರೀತಿಸಿದರು. ಅವರು **'ಅಹೇತುಕ ಕೃಪಾಸಿಂಧು'** ಎಂಬುದಕ್ಕೆ ಇದೊಂದು ಪ್ರಮಾಣ. ಭಗವಂತನ ಹೆಸರುಗಳಲ್ಲಿ **'ಪತಿತೋದ್ಧಾರಕ'** ಎಂಬುದೂ ಒಂದು. ಶ್ರೀರಾಮಕೃಷ್ಣರಿಗೆ ಈ ಹೆಸರು ಅನ್ವರ್ಥವಾಗಿತ್ತು ಎಂಬುದಕ್ಕೆ, ಎಲ್ಲರಿಗಿಂತ  ಮಿಗಿಲಾಗಿ  ನಾನೇ ಸಾಕ್ಷಿಯಾಗಿದ್ದೇನೆ. ಗುರುಮಹಾರಾಜರ ಬಳಿ ಇದ್ದ ಕೆಲವರು ಚಂಚಲ ಮನಸ್ಸಿನವರಾಗಿದ್ದಿರಬಹುದು. ಆದರೆ  ಹುಚ್ಚು ಮತ್ತು ಅಶಾಂತ ಚಂಚಲಚಿತ್ತದವನಾದ ನನ್ನೊಂದಿಗೆ ಹೋಲಿಸಿದರೆ  ಅವರೆಲ್ಲ ಮಹಾತ್ಮರೇ ಸರಿ. ಅವರಲ್ಲಿ ಕೆಲವು ದೌರ್ಬಲ್ಯಗಳು ಇದ್ದಿರಬಹುದು, ಕೆಲವು ವೇಳೆ ಅವರು ಜಾರಿರಬಹುದು, ಆದರೆ ಹಿಮಾಲಯದಂತಹ ನನ್ನ ತಪ್ಪುಗಳಿಗೆ ಹೋಲಿಸಿದರೆ ಅವರ ದೋಷಗಳು ಏನೇನೂ ಅಲ್ಲ. ಬಾಲ್ಯದಿಂದಲೂ ನಾನು ಬೇರೆ ರೀತಿಯಲ್ಲಿಯೇ ಬೆಳೆದೆ. ನೇರವಾದ ಮಾರ್ಗದಲ್ಲಿ ನಡೆಯುವುದನ್ನು ನಾನು ಎಂದೂ ಕಲಿಯಲಿಲ್ಲ. ವಕ್ರಮಾರ್ಗವನ್ನೇ ಅನುಸರಿಸಿದೆ. ಎಷ್ಟೇ ದೋಷಗಳಿದ್ದರೂ ನಾನು ಗುರುಮಹಾರಾಜರ ಅತ್ಯಂತ ಗಾಢಪ್ರೀತಿಗೆ ಪಾತ್ರನಾಗಿದ್ದೆ. ನನ್ನ ವಿಷಯದಲ್ಲಿ ಹೊರತಾಗಿ ಬೇರೆಲ್ಲೂ ಅವರ ಪ್ರೀತಿ ಅಷ್ಟು ಸುಸ್ಪಷ್ಟವಾಗಿ ವ್ಯಕ್ತವಾಗಿಲ್ಲ. ಮುಂದೆ ನಾನು ಹೇಳಲಿರುವ ಕಥೆಯಿಂದ ಓದುಗರಿಗೆ ಅದರ ಮಿಂಚುನೋಟ ಸಿಗುವುದು.

(ಮುಂದುವರಿಯುವುದು)

# ದಾನದ ಮಹಿಮೆ

ಎ. ಲಕ್ಷ್ಮೀಶ್

**ಸ**ತ್ಯಪುರಿ ಎಂಬುದೊಂದು ಊರು. ಅಲ್ಲಿ ಧರ್ಮಯ್ಯನೆಂಬ ಒಬ್ಬ ವ್ಯಾಪಾರಿ ಇದ್ದ. ಅವನ ಹಿಂದಿನವರು ಗಳಿಸಿದ ಐಶ್ವರ್ಯ ತಲೆತಲೆಮಾರು ಅನುಭವಿಸಿ ಉಳಿಯುವಷ್ಟು ಇತ್ತು. ಅವನ ತಲೆಯಲ್ಲಿ ಒಂದು ವಿಚಿತ್ರ ಯೋಚನೆ ಬಂದಿತು. ಅದರಂತೆ ಅವನು ಒಂದು ಹೊಸ ವ್ಯಾಪಾರ ಆರಂಭಿಸಿದ. ಅದು ಪುಣ್ಯವನ್ನು ಕೊಂಡುಕೊಳ್ಳುವ ವ್ಯಾಪಾರ. ಹಣದ ಅಗತ್ಯ ಇದ್ದವರು ಎಷ್ಟೆಷ್ಟೋ ದೂರದಿಂದ ಬಂದು, ತಮ್ಮ ಪುಣ್ಯವನ್ನು ಮಾರಿ ದುಡ್ಡು ತೆಗೆದುಕೊಂಡು ಹೋಗುತ್ತಿದ್ದರು.

ಆ ಊರಿನಿಂದ ಸ್ವಲ್ಪ ದೂರದಲ್ಲಿ ಗುರೂರು ಎಂಬ ಇನ್ನೊಂದು ಹಳ್ಳಿ ಇತ್ತು. ಅಲ್ಲಿ ರಾಮಯ್ಯನೆಂಬ ಒಬ್ಬ ಬಡ ಕೂಲಿಕಾರ್ಮಿಕ ಇದ್ದ. ಅವನು ಎಷ್ಟೇ ಕಷ್ಟಪಟ್ಟರೂ ಹೊಟ್ಟೆಗಾಗುವಷ್ಟು ಮಾತ್ರ ಆದಾಯ ಬರುತ್ತಿತ್ತು. ಅವನ ಹೆಂಡತಿ ಸೀತಮ್ಮನಿಗೆ ಧರ್ಮಯ್ಯನ ವಿಶಿಷ್ಟ ವ್ಯಾಪಾರದ ಸುದ್ದಿ ತಿಳಿಯಿತು. ಅವಳು ತನ್ನ ಪತಿಯನ್ನು, "ಪುಣ್ಯ ಕೊಟ್ಟು ದುಡ್ಡು ತನ್ನಿ. ಮೈಮುಚ್ಚಿಕೊಳ್ಳುವ ಬಟ್ಟೆಯನ್ನಾದರೂ ತೆಗೆದುಕೊಳ್ಳೋಣ, ಹೊಟ್ಟೆ ತುಂಬಾ ಊಟ ಮಾಡೋಣ" ಎಂದು ಪ್ರತಿದಿನ ಬೇಡುತ್ತಿದ್ದಳು. "ನನ್ನ ಹತ್ತಿರ ಏನಿದೆ? ಸಂಸಾರ ನಡೆಸುವುದಕ್ಕೇ ಆಗದ ನಾನು ಏನು ತಾನೆ ಪುಣ್ಯ ಮಾಡಿದ್ದೀನಿ, ಮಾರುವುದಕ್ಕೆ" ಎಂದು ರಾಮಯ್ಯ ಉದಾಸೀನವಾಗಿಯೇ ಇರುತ್ತಿದ್ದ. ಒಂದು ಸಲ ಬಹಳ ಕಷ್ಟ ಬಂದಿತು. ಮೂರು ನಾಲ್ಕು ದಿನ ಕಳೆದರೂ ಕೂಲಿ ಸಿಗಲೇ ಇಲ್ಲ. ಊಟವೇ ಇಲ್ಲದೆ, ದಂಪತಿಗಳು ಬಳಲುವ ಸ್ಥಿತಿ ಬಂದಿತು. ಆಗ ಸೀತಮ್ಮನ ವರಾತ ತುಂಬಾ ಹೆಚ್ಚಾಯಿತು. ಸರಿ, ದೇವರಿಚ್ಛೆಯಂತೆ ಆಗಲಿ ಎಂದು ರಾಮಯ್ಯ ಗಟ್ಟಿಮನಸ್ಸು ಮಾಡಿ, ಸತ್ಯಪುರಿಗೆ ಹೋಗಲು ನಿಶ್ಚಯಿಸಿದ. ಬಹಳ ದೂರ ನಡೆಯಬೇಕಾಗಿದ್ದುದರಿಂದ ಸೀತಮ್ಮ ನೆರೆಯವರಲ್ಲಿ ಸ್ವಲ್ಪ ಹಿಟ್ಟು ಬೇಡಿ ತಂದು, ಎರಡು ರೊಟ್ಟಿ ಮಾಡಿಕೊಟ್ಟಳು. ರಾಮಯ್ಯ ಅವನ್ನು ತೆಗೆದುಕೊಂಡು ಮರುದಿನ ಹೊತ್ತಿಗೆ ಮೊದಲೇ ಹೊರಟ. ಮಧ್ಯಾಹ್ನದ ವೇಳೆಗೆ ಅವನು ಒಂದು ಕೆರೆಯ ಹತ್ತಿರ ಬಂದ. ಹಸಿವು, ಆಯಾಸ ಎರಡೂ ಆಗಿತ್ತು. ಕೆರೆಯಲ್ಲಿ ಕೈಕಾಲು ತೊಳೆದು ರೊಟ್ಟಿ ತಿನ್ನಲು ಕುಳಿತ. ಸಾಯುವ ಸ್ಥಿತಿಯಲ್ಲಿದ್ದ ಒಂದು ಬಡಕಲು ನಾಯಿ ಅಲ್ಲಿಗೆ ಬಂದಿತು. ನಾಲಗೆ ಹೊರಚಾಚಿ ಅವನ ರೊಟ್ಟಿಯನ್ನೇ ನೋಡುತ್ತಾ ನಿಂತಿತು. ರಾಮಯ್ಯನಿಗೆ ಅದರ ಸ್ಥಿತಿ ನೋಡಿ ದುಃಖ ಉಕ್ಕಿ ಬಂತು. ತಡೆಯಲಾಗದೆ ಅದಕ್ಕೆ ಒಂದು ರೊಟ್ಟಿ ಕೊಟ್ಟ. ಅದನ್ನು ತಿಂದು ತೃಪ್ತಿಯಾಗದೆ ಅದು ಇನ್ನೂ ನೋಡುತ್ತಲೇ ಇತ್ತು. ರಾಮಯ್ಯ ತಾನೇ ಮೂರು ದಿನದಿಂದ ಏನೂ ತಿಂದಿರಲಿಲ್ಲ, ಬಹಳ ದೂರದಿಂದ ನಡೆದು ಬಂದಿದ್ದ. ಹಸಿವು ಆಯಾಸಗಳಿಂದ ತಾನೇ ಸಾಯುವಂತಾಗಿದ್ದ. ಆದರೂ ಆ ನಾಯಿಯ ಸ್ಥಿತಿಗೆ ಮರುಗಿ ಇದ್ದ ಇನ್ನೂ ಒಂದು ರೊಟ್ಟಿಯನ್ನು ಕೊಟ್ಟುಬಿಟ್ಟ. ನಾಯಿ ಅದನ್ನೂ ತಿಂದು ಬಾಲ ಅಲ್ಲಾಡಿಸುತ್ತಾ ಹೊರಟುಹೋಯಿತು. ರಾಮಯ್ಯ ಕೆರೆಗೆ ಹೋಗಿ ಹೊಟ್ಟೆ ತುಂಬಾ ನೀರು ಕುಡಿದ. ತನ್ನ ಪ್ರಯಾಣ ಮುಂದುವರೆಸಿ ಸತ್ಯಪುರಿ ತಲುಪಿದ. ಅಲ್ಲಿ ಇಲ್ಲಿ ವಿಚಾರಿಸಿ ಪುಣ್ಯದ ವ್ಯಾಪಾರಿ ಧರ್ಮಯ್ಯನ ಮನೆಗೆ ಬಂದ. ವ್ಯಾಪಾರಿ ಊಟ ಮಾಡಲು ಹೊರಟುಹೋಗಿದ್ದ. ಅಲ್ಲೇ ಕಾದು ಕುಳಿತಿದ್ದ ರಾಮಯ್ಯ, "ಪುಣ್ಯ ಕೊಡು ಎಂದರೆ ಏನು ಕೊಡುವುದು? ನನ್ನಂಥ ಬಡವ ಏನು ಪುಣ್ಯ ತಾನೆ ಗಳಿಸಬಲ್ಲ?" ಎಂದು ಚಿಂತಿಸುತ್ತಿದ್ದ. ಊಟ ಮುಗಿಸಿ ಬಂದ ವ್ಯಾಪಾರಿ ಇವನನ್ನು ನೋಡಿ, "ಏನು ಪುಣ್ಯ


ಚಿತ್ರ : ವಿವೇಕ್ ಪ್ರಭು